ಅಧ್ಯಕ್ಷರು : ಮಾನ್ಯ ಕಿಮ್ಮನೆ ರತ್ನಾಕರ್‌ರವರೆ ಕೇಳಿ.

ವಿಷಯ : ತೀರ್ಥಹಳ್ಳಿ ಭಾಗದಲ್ಲಿ ಮಂಗನ ಕಾಯಿಲೆ ಕುರಿತು.

ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ತೀರ್ಥಹಳ್ಳಿ ಭಾಗದಲ್ಲಿ ಮಂಗನ ಕಾಯಿಲೆ ಬಂದು ನೂರಾರು ಜನರು ಆಸ್ಪತ್ರೆಯನ್ನು ಸೇರಿದ್ದಾರೆ. ಅಲ್ಲಿ ಅವರಿಗೆ ಯಾವುದೇ ರೀತಿ facilities ಸಿಗುತ್ತಿಲ್ಲ. ಸದನದಲ್ಲಿ ಮಾನ್ಯ ಆರೋಗ್ಯ ಸಚಿವರು ಇಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ತೀರ್ಥಹಳ್ಳಿಯ ಶಾಸಕರಾದ ಮಾನ್ಯ ಕಿಮ್ಮನೆ ರತ್ನಾಕರ್‌ರವರು ತೀರ್ಥಹಳ್ಳಿಯ ಭಾಗದಲ್ಲಿ ಮಂಗನ ಕಾಯಿಲೆ ಬಹಳ ವ್ಯಾಪಕವಾಗಿ ಹರಡುತ್ತಿದೆ.

ಶ್ರೀ ಗೋಪಾಲಕೃಷ್ಣ ಬೇಳೂರು : ಮಾನ್ಯ ಅಧ್ಯಕ್ಷರೆ, ತೀರ್ಥಹಳ್ಳಿ ಒಂದೇ ಅಲ್ಲ. ಹೊಸನಗರ ನಮ್ಮ ತಾಲ್ಲೂಕು ಬಾರ್ಡರ್‌ನಲ್ಲಿದ್ದು ಇಲ್ಲೂ ಇತ್ತೀಚೆಗೆ ಈ ಕಾಯಿಲೆ ಬಹಳ ಕಾಣಿಸಿಕೊಂಡಿದೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ತೀರ್ಥಹಳ್ಳಿ ಮತ್ತು ಹೊಸನಗರದ ಭಾಗಗಳಲ್ಲಿ ಮಂಗನ ಕಾಯಿಲೆ ವ್ಯಾಪಕವಾಗಿ ಹರಡಿ, ವಿಪರೀತ ಪರಿಣಾಮವಾಗುತ್ತಿದೆ. ಇದರ ಬಗ್ಗೆ ಸರ್ಕಾರ ಸಂಪೂರ್ಣವಾಗಿ ವರದಿಯನ್ನು ತೆಗೆದುಕೊಂಡು ತುರ್ತು ಕ್ರಮಗಳನ್ನು ಜರುಗಿಸಿ, ಆ ಕಾಯಿಲೆಯ ನಿಯಂತ್ರಣಕ್ಕೆ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೋ, ಅದನ್ನು ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಕಿಮ್ಮನೆ ರತ್ನಾಕರ್ : ಮಾನ್ಯ ಅಧ್ಯಕ್ಷರೆ, ಇಲ್ಲಿ ವಾಸ್ತವವಾಗಿ ಸಮಸ್ಯೆ ಏನು ಆಗಿದೆಯೆಂದರೆ, ಕಳೆದ ಎರಡು ವರ್ಷಗಳಿಂದ ಇದೇ ಸಮಯದಲ್ಲಿ ಈ ಕಾಯಿಲೆ ಬರುತ್ತಿದೆ. ಅಲ್ಲಿ ಡಾಕ್ಟರ್‌ಗಳಿಲ್ಲ blood testing ಗೆ facilities ಇಲ್ಲ, water problem ಇದೆ. ಇದಕ್ಕೆ ಸೂಕ್ತ ಕ್ರಮವನ್ನು ತೆಗೆದುಕೊಂಡಿಲ್ಲ. ನಾನು 15 ದಿವಸಗಳ ಹಿಂದೆಯೂ ಕೂಡ ಲಿಖಿತ ರೂಪದಲ್ಲಿ ಸಂಬಂಧಪಟ್ಟ ಸಚಿವರಿಗೂ, ಮಾನ್ಯ ಮುಖ್ಯಮಂತ್ರಿಯವರಿಗೂ ಮತ್ತು ಡಿ.ಸಿ.ಯವರಿಗೂ ಪತ್ರವನ್ನು ಬರೆದಿದ್ದೇನೆ. ಕಳೆದ 15 ದಿವಸಗಳಿಂದಲೂ ಯಾವುದೇ ರೀತಿ ಸೂಕ್ತವಾದ ಕ್ರಮಗಳನ್ನು ತೆಗೆದುಕೊಂಡಿಲ್ಲ. ಈಗ ಏನಾಗಿದೆಯೆಂದರೆ, ನೂರು ಜನರಿಗೂ ಹೆಚ್ಚು ರೋಗಿಗಳು ಆಸ್ಪತ್ರೆಗೆ admit ಆಗಿದ್ದಾರೆ. ಅಲ್ಲಿ blood testing facilities ಇಲ್ಲ. ಕೋಣಂದೂರಿನಲ್ಲಿ ಆಸ್ಪತ್ರೆ ಇದೆ, ಇಲ್ಲಿ ಒಬ್ಬ ಡಾಕ್ಟರ್ ಇದ್ದಾರೆ. ಅವರಿಗೆ ಕಾರ್ಯ ನಿರ್ವಹಿಸುವುದಕ್ಕೆ ಆಗುತ್ತಿಲ್ಲ. ಇದರಿಂದ ಬಹಳ

ದೊಡ್ಡ ಸಮಸ್ಯೆಯಾಗಿದೆ. ನಮ್ಮ ಮೇಲೆ ನಾವು ಏನೂ ಮಾಡುತ್ತಿಲ್ಲವೆಂಬ ರೀತಿಯಲ್ಲಿ ಸುಮ್ಮನೆ ಆಪಾದನೆ ಮಾಡುತ್ತಾರೆ. ನಾನು ಈಗಾಗಲೇ ಲಿಖಿತ ರೂಪದಲ್ಲಿ ಬರೆದುಕೊಟ್ಟಿದ್ದೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಆತಂಕವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸುತ್ತದೆ, ಅವರು ಅಲ್ಲಿ ವೈದ್ಯರ ಬಗ್ಗೆ, ಔಷಧಿ ಬಗ್ಗೆ blood testing ಬಗ್ಗೆ, ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಅವರು ಈ ಹಿಂದೆಯೂ ಕೂಡ ಪತ್ರವನ್ನು ಕೊಟ್ಟಿದ್ದೇನೆಂಬ ಮಾತನ್ನು ಹೇಳಿದ್ದಾರೆ. ನಾವು ಇದರ ಬಗ್ಗೆ ತುರ್ತು ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಗೋಪಾಲಕೃಷ್ಣ ಬೇಳೂರು : ಮಾನ್ಯ ಅಧ್ಯಕ್ಷರೆ, ಮಂಗನ ಕಾಯಿಲೆ ಮತ್ತು ಕ್ಯಾಸನೂರು ಕಾಯಿಲೆ ಎನ್ನುವಂಥದ್ದು ಬಹಳ serious ಇದೆ. ಇತ್ತೀಚೆಗೆ ಮಂಗಗಳು ಬಹಳ ಸಾಯುತ್ತಿವೆ. ಇದು ಬಹಳ serious ಇದೆ, ಬಹಳ ಎಚ್ಚರಿಕೆಯಿಂದ ಕೆಲಸ ಮಾಡಬೇಕಾಗಿದೆ, ತಕ್ಷಣ ಒಂದು ತಂಡವನ್ನು ರಚನೆ ಮಾಡಿ ಕಳುಹಿಸುವಂಥ ಅವಶ್ಯಕತೆ ಇದೆ.

ಶ್ರೀ ಕೆ.ಜಿ. ಕುಮಾರಸ್ವಾಮಿ : ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಟೆಕ್ನಿಶಿಯನ್ಸ್ ಸಹ ಬಹಳಷ್ಟು ಬೇಕಾಗುತ್ತದೆ.

ಅಧ್ಯಕ್ಷರು : ಮಾನ್ಯ ಅಭಯಚಂದ್ರ ಜೈನ್‌ರವರೆ ಕೇಳಿ.

ವಿಷಯ : ಶಾಲಾ ವಿದ್ಯಾರ್ಥಿಗಳ ಮೇಲೆ ಅನಾವಶ್ಯಕವಾಗಿ ಲಾಠಿ ಪ್ರಹಾರ ಮಾಡಿರುವ ಬಗ್ಗೆ

ಶ್ರೀ ಕೆ. ಅಭಯಚಂದ್ರ ಜೈನ್ (ಮೂಡಬಿದ್ರಿ) : ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದ ಬಜ್ಪೆಯಲ್ಲಿ ಶಾಲಾ ವಿದ್ಯಾರ್ಥಿಗಳ ಮೇಲೆ ಬಜ್ಪೆ ಇನ್‌ಸ್ಪೆಕ್ಟರ್ ಲಾಠಿ ಪ್ರಹಾರ ಮಾಡಿರುವ ಬಗ್ಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

ಶ್ರೀ ಎಸ್. ಸುರೇಶ್ ಕುಮಾರ್ : **(ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು)** : ಮಾನ್ಯ ಅಧ್ಯಕ್ಷರೆ, ವಿರೋಧಪಕ್ಷದ ಮುಖ್ಯ ಸಚೇತಕರಾದ ಮಾನ್ಯ ಅಭಯಚಂದ್ರ ಜೈನ್‌ರವರು ಮಂಗಳೂರು ತಾಲ್ಲೂಕಿನ ಬಜ್ಪೆ ಪೊಲೀಸ್ ಸ್ಟೇಷನ್‌ನ ಸರ್ಕಲ್ ಇನ್‌ಸ್ಪೆಕ್ಟರ್‌ರವರು ದಿನಾಂಕ: 16-01-2012 ರಂದು 6ನೇ ಮತ್ತು 7ನೇ ತರಗತಿ ಓದುತ್ತಿರುವ